ಮುಜುಗರದ ಕತೆಗಳು ಅಡಗುತ್ತ, ನಾಚುತ್ತ ಹಿತ್ತಲ ಬಾಗಿಲಿಂದ ನೆರಳಂತೆ ಒಳಗೆ ಬರುತ್ತಿದ್ದವು. ಅವರೆಲ್ಲ ಅರ್ಧ ಪ್ರಾಯ ಕಳೆದ ಸನಿಹದ ನೆಂಟರಾಗಿರುತ್ತಿದ್ದರು. ಅಡುಗೆ ಮನೆಯ ಒಲೆ ಎದುರು, ದೇವರೊಳದ ಮೂಲೆಯಲ್ಲಿ ಕೂತು ಪಿಸು ಮಾತಿನಲ್ಲಿ ಸಂಸಾರದ ಕಾಮ–ಪ್ರೇಮದ ಗುಟ್ಟನ್ನು ಹಂಚಿಕೊಳ್ಳುತ್ತಿದ್ದರು; ಗೂನು ಬೆನ್ನಿನ ಮನುಷ್ಯ, ದಮ್ಮಿನಿಂದ ಏದುಸಿರು ತೇಕುತ್ತಿದ್ದ ಅಳುಬುರುಕಿ ಸಣಕಲು ಹೆಂಗಸು ಇಂಥವರೇ; ನನ್ನ ತಾಯಿ ಅವರಿಗೆ ಅದೇನೊ ಹೇಳಿ ಸಂತೈಸುತ್ತಿದ್ದಳು. ನನ್ನ ತಾಯಿ ಮತ್ತು ಮದುವೆಗೆ ನಿಂತ ನಾಲ್ಕು ಅಕ್ಕಂದಿರ ದಿಗಿಲು ಹೆಚ್ಚುವಂತಹ ವದಂತಿಯನ್ನು ಅವರು ತರುತ್ತಿದ್ದರು.

◆ ಸಾಕಷ್ಟು ದೊಡ್ಡ ಕುಟಂಬವೇ ನಿಮ್ಮದು. ಇದನ್ನು ನಿರ್ವಹಿಸುವಷ್ಟು ಸ್ಥಿತಿವಂತರಾಗಿದ್ದರೆ ನಿಮ್ಮ ತಂದೆ?

ಅಂಥ ಅವಿಭಕ್ತ ಕುಟುಂಬವನ್ನು ಕಂಡವನಲ್ಲ ನಾನು. ನನ್ನ ತಂದೆ ದೊಡ್ಡ ಕುಟುಂಬದಲ್ಲಿ ಇದ್ದರಂತೆ. ನಾನು ವಿಘಟನೆಯ ಹಾದಿಯ ಕತೆಯನ್ನು ಕೇಳಿದವನು. ನನ್ನ ತಂದೆ ಬೇರೆ ಊರೊಂದರ ಅವಿಭಕ್ತ ಕುಟುಂಬದಿಂದ ಮನನೊಂದು ಉಟ್ಟ ವಸ್ತ್ರದಲ್ಲಿ ಬಂದು ಯಾರದೊ ಮನೆಯಲ್ಲಿ ದನಗಾಹಿಯಾಗಿ ಇದ್ದು ಒಂದಿಷ್ಟು ದಿನ ಶಾಲೆಗೆ ಹೋಗಿ ಯಾರದೊ ಸಹಾಯದಿಂದ ಜಮೀನು ಹಿಡಿದು, ಮದುವೆಯಾಗಿ, ಮನೆ ಕಟ್ಟಿ, ಒಂಬತ್ತು ಮಕ್ಕಳ ಸಂಸಾರ ತೂಗಿ, ಮೂರು ಜನ ಹೆಣ್ಣು ಮಕ್ಕಳ ಧಾರೆ ಎರೆದು ಕಣ್ಮುಚ್ಚಿದರು. ಅನೇಕ ವರ್ಷಗಳ ವರೆಗೆ ಮೂಲ ಮನೆತನದ ಸಂಪರ್ಕವೇ ಗೊತ್ತಿರಲಿಲ್ಲ; ಸೂತಕದ ಸುದ್ದಿಯೂ ಬರುತ್ತಿರಲಿಲ್ಲ! ಆ ವರ್ಷ ನಡೆದ ಪ್ರಸಂಗಗಳನ್ನು ನನ್ನ ತಾಯಿ ಹೇಳಿದ ನೆನಪಿದೆ. ನಮ್ಮ ಜಮೀನು ಕೇರಿಯ ನರಸಿಂಹ ದೇವಸ್ಥಾನದ ಒಕ್ಕಲು ಭೂಮಿ; ಗೇಣಿ ಕೊಡಲಾಗಲಿಲ್ಲ; ಮಳೆ ಕೊರತೆಯಾಗಿ, ಹಂದಿಗಳ ಕಾಟದಿಂದ ಆ ವರ್ಷದ ಬೆಳೆ ನಷ್ಟವಾಗಿತ್ತು; ಅದಾಗಲೆ ಕಂದಾಯ ಅಧಿಕಾರಿಗಳು ಲೇವಿ ಭತ್ತವನ್ನು ವಸೂಲಿ ಮಾಡಿಕೊಂಡು ಹೋಗಿದ್ದರು; ದೇವಸ್ಥಾನದ ಮೊಕ್ತೇಸರ ಊಟಕ್ಕಿದ್ದ ಕಣಜದ ಭತ್ತವನ್ನು ಮೊಗೆದುಕೊಂಡು ಹೋಗಿದ್ದ; ಕೇರಿಯ ಕೊನೆಯಲ್ಲಿದ್ದ ನಮ್ಮ ಗದ್ದೆ ಹೂಡುತ್ತಿದ್ದ ಶೀನನ ಬಿಡಾರದಿಂದ ಅಕ್ಕಿ ತಂದು ನಮಗೆ ಕೂಳು ಬೇಯಿಸಿ ಹಾಕುವಷ್ಟರಲ್ಲಿ ಸಂಜೆ ಅಂಗಳಕ್ಕಿಳಿದಿತ್ತು. ಇದು ಧರ್ಮ ಮತ್ತು ಸರಕಾರದ ಹೆಸರಿನಲ್ಲಿ ನಡೆದ ದೌರ್ಜನ್ಯವಾಗಿತ್ತು. ಶೀನನಂಥ ಬಡವನ ದಯೆಗೆ ಕರಗಿದ ಕ್ಷಣ ಅದು; ತಳ್ಳಿ ಅರ್ಜಿ ಹಾಕಿಸಿ ಮನೆಯನ್ನು ಪಂಚನಾಮೆ ಮಾಡಿಸಿದರು; ಕೆರೆ ನೀರು ಬಿಡದೆ ಗಡಿ ಜಮೀನಿನವರು ಸತಾಯಿಸಿದರು; ಮದುವೆ ಪ್ರಾಯದ ಅಕ್ಕಂದಿರ ಬಗ್ಗೆ ಅಶ್ಲೀಲ ಕತೆ ಕಟ್ಟಿ ಹಬ್ಬಿಸಿದರು; ನಾವು ಪರಸ್ಥಳದವರು ಎಂಬ ಅಸಹನೆಯೇ ಆಕ್ರಮಣಕ್ಕೆ ಕಾರಣವಾಗಿರಬೇಕು. ಶಾಲೆಯಲ್ಲಿ, ಒಸಗೆಗಳಲ್ಲಿ ನಿಂದನೆ ಬೇರೆ.

◆ ನಿಮ್ಮ ಅನೇಕ ಕತೆಗಳಲ್ಲಿ ಮನುಷ್ಯನ ಸಣ್ಣತನ ಕಾಣಿಸಿಕೊಳ್ಳುವುದೇ ಲೈಂಗಿಕ ರಾಜಕಾರಣದಲ್ಲಿ. 'ಮಾಲತಿ ಮಾತಾಡಿದಳು' ಕತೆಯ ಬಾಬಣ್ಣನಂತಹವರು ಇವರ ಅಸಹಾಯಕತೆಯ ಪ್ರಯೋಜನವನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಾರೆ. ಇವುಗಳಿಗೆಲ್ಲ ನಿಮ್ಮ ತಾಯಿ ಹೇಗೆ ಪ್ರತಿಕ್ರಿಯಿಸಿದ್ದರು?

ನನ್ನ ತಾಯಿ ಬಲು ಗಟ್ಟಿಗಿತ್ತಿ; ಮಣ್ಣು ಹಸಿಯಿದ್ದಾಗ ಪೆಟ್ಟು ತಿಂದ ಮಡಕೆ ಮಾಟ ಪಡೆದು, ಭಟ್ಟಿಯಲ್ಲಿ ಗಟ್ಟಿಯಾಗಿ ಮಾಗಿ ಆಮೇಲೆ ಎಂಥ ಉರಿ ಕುದಿಯನ್ನೂ ಸಹಿಸಿಕೊಂಡ ಹಾಗೆ ಅವಳು. ಅದು ಬಡತನ ಮತ್ತು ಅವಮಾನದ ಕಷ್ಟ ಕಾಲವಾಗಿತ್ತು ನಮಗೆ. ಇಂಥ ನಿಕೃಷ್ಟತೆಯನ್ನು ಮೀರಲು ಅವಳು ಮನೆಗೆ ಆಧುನಿಕ ಪೀಠೋಪಕರಣ ಮಾಡಿಸಿದಳು; ಅವುಗಳಿಗೆ ಸರಕಾರಿ ನೌಕರರನ್ನು